454 ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ "ಬಿ" ಸ್ಕೀಮ್ ಅನ್ನು ಅನುಷ್ಠಾನಗೊಳಿಸಲು ಸರ್ಕಾರ ನಿರ್ಧರಿಸಿದೆಯೇ ;

ಆ) ಹಾಗಿದ್ದಲ್ಲಿ ಈ "ಬಿ" ಸ್ಕೀಮ್ ಅಡಿಯಲ್ಲಿ ಕೈಗೊಳ್ಳಲಿರುವ ಯೋಜನೆಗಳು ಯಾವುದು ;

ಇ) ಇದರಿಂದ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿಯಾಗುತ್ತದೆ;

ಈ) 2006–07ನೇ ಸಾಲಿನಲ್ಲಿ ಮೇಲ್ಕಂಡ ಯೋಜನೆಗೆ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು ;

ಉ) ಕೈಗೆತ್ತಿಕೊಂಡಿರುವ ಯೋಜನೆಗಳ ಪ್ರಗತಿ ಬಗ್ಗೆ ವಿವರ ನೀಡುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಕೃಷ್ಣಾ ನ್ಯಾಯಮಂಡಳಿಯ ತೀರ್ಪಿನ ನಂತರ 'ಬಿ' ಸ್ಕೀಂನಲ್ಲಿ ದೊರಕಬಹುದಾದ ನೀರಿನ ಹಂಚಿಕೆ ಆಧರಿಸಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದಾಗಿರುತ್ತದೆ.

ಆ ಮತ್ತು ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಸ್ಕೀಮ್ 'ಬಿ' ಅಡಿಯಲ್ಲಿ 9 ಯೋಜನೆಗಳನ್ನು ಗುರುತಿಸಲಾಗಿದೆ. ಈ ಯೋಜನೆಗಳಿಂದ ಸುಮಾರು 5,30,475 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಗೊಳಿಸಬಹುದಾಗಿದೆ ಎಂದು ಅಂದಾಜಿಸಲಾಗಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಈ) ಈ ಉಪ ಯೋಜನೆಗಳ ಸರ್ವೆ ಮತ್ತು ತನಿಖಾ ಕಾರ್ಯಗಳಿಗೆ ರೂ. 35.76 ಲಕ್ಷಗಳನ್ನ ವೆಚ್ಚ ಮಾಡಲಾಗಿದೆ.

ಉ) ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ

ಅನುಬಂಧ–1

MASTER PLAN OF KARNATAKA FOR UTILISATION OF SURPLUS WATER UNDER SCHEME 'B'

Sl No	Name of the Schemes proposed	Sub-=Basin	Allocation in time	Estimated Area in Ha
1	2	3	4	5
1	NRBC	K-2	18.982	61747

2	BHIMA FLANK	K-2	5.151	21572
3	IND IL IS (EXTENSION)	K-2	4.940	20690
4	RAMPUR LIS	K-2	3.324	13923
5	HERKAL LIS	K-2	3.664	15344
6	UNSERVED AREA BETWEEN JBC, MBC & SBC	K-2	8.054	33730
7	MULWAD LIS	K-2	54.431	227966
8	CHIMMALAGI LIS	K-2	20.789	87067
9	SCHEME BENEFITTING KOPPAL DISTRICT	K-2	11.565	48436
	Total:		130.90	5,30,475Ha

ಈ) ಈ ಉಪ ಯೋಜನೆಗಳ ಸರ್ವೆ ಮತ್ತು ತನಿಖಾ ಕಾರ್ಯಗಳಿಗೆ ರೂ. 35.76 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಉ) ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ

567 ಶ್ರೀ ರೋಷನ್ ಬೇಗ್ : ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಸತಿ ರಹಿತರ ಮತ್ತು ನಿವೇಶನ ರಹಿತರ–ಸಂಖ್ಯಾವಾರು ವಿವರವನ್ನು ನೀಡುವುದು;

ಆ) ಈ ಕುರಿತು ಯಾವುದಾದರೂ ಸಮೀಕ್ಷೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ರಾಜ್ಯದಲ್ಲಿರುವ ವಸತಿ ರಹಿತರು ಮತ್ತು ನಿವೇಶನ ರಹಿತರ ಸಮೀಕ್ಷೆಗಳನ್ನು 2003ರ ಜೂನ್ ತಿಂಗಳಿನಲ್ಲಿ ನಡೆಸಲಾಗಿತ್ತು. ಈ ಸಮೀಕ್ಷೆ ಪ್ರಕಾರ ಒಟ್ಟು ರಾಜ್ಯದಲ್ಲಿ 1299789 ವಸತಿ ರಹಿತರು 1298813 ನಿವೇಶನ ರಹಿತರು ಇರುವುದು ಕಂಡುಬಂದಿದೆ.

ಆ) ವಸತಿ ರಹಿತರ ಮತ್ತು ನಿವೇಶನ ರಹಿತರ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

xx xx xx